


International Journal of Kannada Research
www.kannadajournal.com

**ISSN: 2454–5813**
IJKR 2021; 7(4): 01-06
© 2021 IJKR
www.kannadajournal.com
Received: 09-06-2021
Accepted: 03-08-2021

**ಡಾ. ಷಣ್ಮುಖ**
ಸಹಾಯಕ ಪ್ರಾಧ್ಯಾಪಕರು,
ಶಿಕ್ಷಣ ಅಧ್ಯಯನ ಮತ್ತು
ಸಂಶೋಧನಾ ವಿಭಾಗ,
ಕರ್ನಾಟಕ ರಾಜ್ಯ
ವಿಶ್ವವಿದ್ಯಾಲಯ, ಮೈಸೂರು,
ಕರ್ನಾಟಕ, ಭಾರತ

**Corresponding Author:**
**ಡಾ. ಷಣ್ಮುಖ**
ಸಹಾಯಕ ಪ್ರಾಧ್ಯಾಪಕರು,
ಶಿಕ್ಷಣ ಅಧ್ಯಯನ ಮತ್ತು
ಸಂಶೋಧನಾ ವಿಭಾಗ,
ಕರ್ನಾಟಕ ರಾಜ್ಯ
ವಿಶ್ವವಿದ್ಯಾಲಯ, ಮೈಸೂರು,
ಕರ್ನಾಟಕ, ಭಾರತ

# ಪ್ರಾಥಮಿಕ ಶಾಲಾ ಶಿಕ್ಷಕರ ವೃತ್ತಿಮನೋಭಾವಗಳು ವೃತ್ತಿತೃಪ್ತಿಯೊಡನೆ ಹೊಂದಿರುವ ಪ್ರಭಾವದ ವಿಶ್ಲೇಷಣಾತ್ಮಕ ಅಧ್ಯಯನ

**ಡಾ.ಷಣ್ಮುಖ**

## ಪರಿಚಯ

ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೃತ್ತಿ ಶಿಕ್ಷಕರ ವೃತ್ತಿಮನೋಭಾವಗಳ ಅಧ್ಯಯನವನ್ನು ನಡೆಸಿದ್ದು. ಈ ಅಧ್ಯಯನವು ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಹಾಗೂ ಅವರ ಸಹಗುಂಪುಗಳ ನಡುವೆ ವೃತ್ತಿಮನೋಭಾವ ಮತ್ತು ವೃತ್ತಿತೃಪ್ತಿ ನಡುವೆ ಇರಬಹುದಾದ ವ್ಯತ್ಯಾಸಗಳನ್ನು ಅರಿಯಲು ನಡೆಸಿದೆ. ಅಗತ್ಯವಾದ ಮಾಹಿತಿ ಸಂಗ್ರಹಿಸಿ ಸಂಖ್ಯಾಶಾಸ್ತ್ರೀಯ ವಿಶ್ಲೇಷಣತಂತ್ರ ಬಳಸಿ ಸರಾಸರಿಗಳನ್ನು ಅಳೆಯಲಾಗಿದೆ. ಶಿಕ್ಷಕರ ವೃತ್ತಿಮನೋಭಾವವನ್ನು ನಾಲ್ಕು ಉಪವಿಭಾಗಗಳಿಂದ ಅಳೆಯಲಾಗಿದೆ.

1. ವೃತ್ತಿ ಬಗೆಗಿನ ಮನೋಭಾವ– ಬೋಧನೆ ಒಂದು ವೃತ್ತಿಯಾಗಿ (ATP) Teaching as a profession.
2. ವಿದ್ಯಾರ್ಥಿ ಬಗೆಗಿನ ಮನೋಭಾವ– ಒಟ್ಟಾರೆ ವಿದ್ಯಾರ್ಥಿಗಳು (ASG) Students in general.
3. ಶಾಲೆ ಕಾರ್ಯದ ಬಗೆಗಿನ ಮನೋಭಾವ ಒಟ್ಟಾರೆ ಶಾಲೆಕೆಲಸ (ASW) School work as a whole.
4. ವೃತ್ತಿ ಬಗೆಗಿನ ಸಾಮಾನ್ಯ ಮನೋಭಾವ–ವೃತ್ತಿಬೆಳವಣಿಗೆ-(APG) Professional growth.

ಇವುಗಳಿಗೆ ಸಂಬಂದಿಸಿದಂತೆ ಪುರುಷ, ಮಹಿಳೆ, ಶಿಕ್ಷಕರು ಇವುಗಳನ್ನು ಹೋಲಿಸಿ ನೋಡಲಾಗಿದೆ. ಒಟ್ಟು 644 ಶಿಕ್ಷಕರಿಂದ ಮಾಹಿತಿಯನ್ನು ಆಧ್ಯಯನಕ್ಕಾಗಿ ಪಡೆಯಲಾಗಿದೆ. ಪುರುಷ ಶಿಕ್ಷಕರಿಗಿಂತ ಮಹಿಳಾ ಶಿಕ್ಷಕರ ವೃತ್ತಿ ಮನೋಭಾವಗಳು ಉತ್ತಮವಾಗಿದೆ. ಶಿಕ್ಷಕರ ವೃತ್ತಿ ಮನೋಭಾವಗಳು ಉತ್ತಮವಾಗಿರುವಂತೆ/ಹೆಚ್ಚಾದಂತೆ ವೃತ್ತಿತೃಪ್ತಿ ಉತ್ತಮವಾಗಿದೆ.
ಪ್ರಮುಖ ಪದಗಳು: ವೃತ್ತಿ ಮನೋಭಾವಗಳು, ಪ್ರದೇಶ, ಶಾಲೆ, ಒಟ್ಟಾರೆ ಶಾಲಾ ಕಾರ್ಯ, ಶಿಕ್ಷಕರು, ಶಾಲೆ ಕೆಲಸ, ವೃತ್ತಿಬೆಳವಣಿಗೆ.

## ಪೀಠಿಕೆ

ಶೈಕ್ಷಣಿಕ ವ್ಯವಸ್ಥೆ ಎಲ್ಲಾ ವ್ಯವಸ್ಥೆಗಳಿಗಿಂತ ಬಲಿಷ್ಠವೂ ಮತ್ತು ಪರಿಣಾಮಕಾರಿಯೂ ಹೌದು. ಪ್ರಜಾಪ್ರಭುತ್ವವಾದಿ ಪ್ರತಿಯೊಂದು ದೇಶವು ತನ್ನ ಶೈಕ್ಷಣಿಕ ಸಾಂಸ್ಕೃತಿಕ ಗುರುತನ್ನು ಪ್ರತಿಬಿಂಬಿಸಲು, ರಾಷ್ಟ್ರದ ಸವಾಲುಗಳನ್ನು ಎದುರಿಸಲು ತನ್ನದೇ ಆದ ಶೈಕ್ಷಣಿಕ ವ್ಯವಸ್ಥೆಯನ್ನು ರೂಪಿಸುತ್ತದೆ. ಸಾಮಾಜಿಕ, ಸಾಂಸ್ಕೃತಿಕ ಮತ್ತು ಔದ್ಯಮಿಕ ಲಾಭವನ್ನು ಎಲ್ಲಾ ವರ್ಗದ ಜನರಿಗೂ ತಲುಪಿಸಲು ಶಿಕ್ಷಣ ಅತ್ಯಗತ್ಯ. ರಾಷ್ಟ್ರದ ಪ್ರಗತಿಯಲ್ಲಿ ಶಿಕ್ಷಣದ ಪಾತ್ರ ಮಹೋನ್ನತವೂ, ಗಮ್ಯವೂ ಆಗಿರುತ್ತದೆ.
ವಿಶ್ವದ ದೃಷ್ಟಿಯಲ್ಲಿ ಒಂದು ರಾಷ್ಟ್ರ ಅಭಿವೃದ್ಧಿ ಸಾಧಿಸಿದೆ ಎಂದರೆ ಅದು ಆ ದೇಶದಲ್ಲಿ ನಡೆದಿರುವ ಶಿಕ್ಷಣದ ಮಟ್ಟವನ್ನು ಅವಲಂಭಿಸಿದೆ ಎಂದು ಅರ್ಥ. ಪ್ರಜಾಪ್ರಭುತ್ವದ ಯಶಸ್ವಿಗೆ ಸಮುದಾಯಗಳ ಬೆಳವಣಿಗೆಗೆ ಉತ್ತಮ ಶಿಕ್ಷಣ, ಅತ್ಯುತ್ತಮ ಶಿಕ್ಷಕ ವರ್ಗ ಕಾರಣವಾಗುತ್ತದೆ.
ಶಿಕ್ಷಕರು ದೇಶದ ಶಿಕ್ಷಣ ವ್ಯವಸ್ಥೆಯ ಬೆನ್ನೆಲುಬು ಆಗಿದ್ದಾರೆ ವಿಕಸಿಸುತ್ತಿರುವ ಸಮಾಜದಲ್ಲಿ ಶಿಕ್ಷಕ ವಿದ್ಯಾರ್ಥಿಗಳ ಬೆಳವಣಿಗೆಗೆ ಅವರ ಪಾತ್ರ ಎಲ್ಲಾ ರಂಗಗಳ ಮೇಲೂ ಪ್ರಭಾವ ಬೀರುತ್ತದೆ. ಶಿಕ್ಷಕರು ಹೆಚ್ಚಿನ ಮಟ್ಟದಲ್ಲಿ ಕ್ರಿಯಾಶೀಲರಾಗುತ್ತಾರೊ ಹಾಗೆಯೇ ಶಿಕ್ಷಣ ಮಟ್ಟ ಉತ್ತಮ ಸ್ಥಿತಿ ತಲುಪುತ್ತಿದೆ. ಹಾಗೂ ಶಿಕ್ಷಣದ ಪ್ರಗತಿಯೂ ಸಾಗುತ್ತಾ ಹೋಗುತ್ತಿದೆ.

ಶಿಕ್ಷಕರ ವೃತ್ತಿಮನೋಭಾವ ಶಿಕ್ಷಣ ಕ್ಷೇತ್ರದಲ್ಲೂ ತಮ್ಮದೇ ಆದ ಪ್ರಭಾವ ಬೀರಿವೆ ಹಾಗೂ ಪ್ರಮುಖ ಸ್ಥಾನ ಹೊಂದಿದೆ. ಈ ಹಿನ್ನೆಲೆಯಲ್ಲಿ ಬೇರೆ ಬೇರೆ ಕಾರ್ಯ ಸ್ಥಳ, ಶಿಕ್ಷಕರ ಲಿಂಗ, ಸಂಬಳ, ವಿದ್ಯಾರ್ಹತೆ ಇವುಗಳನ್ನ ಪ್ರಭಾವಿಸುತ್ತದೆ. ಮಹಿಳಾ–ಪುರುಷ, ಶಿಕ್ಷಕರು ಗ್ರಾಮೀಣ–ನಗರಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ವೃತ್ತಿಮನೋಭಾವವನ್ನು ಸಂಶೋಧನೆ ಮೂಲಕ ಅಳೆದು ಫಲಿತ ಕಾರಣಗಳನ್ನು ತಿಳಿಯಲಾಗಿದೆ.

**ಅಧ್ಯಯನದ ಉದ್ದೇಶಗಳು**

- ಪ್ರಾಥಮಿಕ ಶಾಲಾ ಶಿಕ್ಷಕರ ಮನೋಭಾವ ಅಳೆಯಲು ಯುಕ್ತ ತಪಶೀಲಿನ ಬಳಕೆ ಮಾಡಲಾಗಿದೆ.
- ಲಿಂಗ, ಶಿಕ್ಷಕರ ವೃತ್ತಿಮನೋಭಾವಗಳು ವೃತ್ತಿತೃಪ್ತಿ ಕಾರ್ಯನಿರ್ವಹಿಸುತ್ತಿರುವ ಸ್ಥಳದ ಆಧಾರದ ಮೇಲೆ ರೂಪಿಸಿರುವ ಸರಾಸರಿಗಳ ನಡುವೆ ವ್ಯತ್ಯಾಸಗಳನ್ನು ತಿಳಿದುಕೊಳ್ಳುವುದು.
- ವೃತ್ತಿಮನೋಭಾವ ಮತ್ತು ವೃತ್ತಿತೃಪ್ತಿ ಶಿಕ್ಷಕರಲ್ಲಿ ಹೇಗೆ ಕಂಡುಬಂದಿದೆ ಎಂಬುದನ್ನು ಸ್ಥಿರೀಕರಿಸುವುದು.
- ಗ್ರಾಮೀಣ, ಗ್ರಾಮಾಂತರ ನಗರ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಶಿಕ್ಷಕರ, ಪುರುಷ ಮತ್ತು ಮಹಿಳಾ ಶಿಕ್ಷಕರ ನಡುವೆ ವೃತ್ತಿಮನೋಭಾವಗಳ ವ್ಯತ್ಯಾಸ ಪತ್ತೆ ಹಚ್ಚುವುದು.

**ಪ್ರಾಕಲ್ಪನೆಗಳು:**
ವೃತ್ತಿಮನೋಭಾವಗಳು–ವೃತ್ತಿತೃಪ್ತಿಯೊಡನೆ ಸಂಬಂಧ ಹೊಂದಿದೆ. ವೃತ್ತಿಮನೋಭಾವಕ್ಕೂ, ವೃತ್ತಿತೃಪ್ತಿಗೂ ಶೀಕ್ಷಕರ ಲಿಂಗತ್ವಕ್ಕೂ ಸಂಬಂಧವಿಲ್ಲ.

**ವ್ಯಾಪ್ತಿ ಮತ್ತು ಇತಿಮಿತಿ**
ಈ ಅಧ್ಯಯನವು ಪ್ರಾಥಮಿಕ ಶಾಲಾ ಶಿಕ್ಷಕರು ಹೊಂದಿರುವ ತಮ್ಮ ವೃತ್ತಿಯ ಬಗೆಗಿನ ಮನೋಭಾವ ಕುರಿತು ಅಧ್ಯಯನ ಮಾಡಿದೆ ವಿವಿಧ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಮನೋಭಾವಗಳನ್ನು ತುಲನೆ ಮಾಡಿ ಈ ಅಧ್ಯಯನ ನಡೆಸಲಾಗಿದೆ.

**ಅಗತ್ಯ ಮಾಹಿತಿ–ಮಾಹಿತಿ ಸಂಗ್ರಹಣೆ.**
ಈ ವಿಧಾನವು ಸಮೀಕ್ಷಾ ಅಧ್ಯಯನವಾಗಿದೆ. ಯುಕ್ತ ಪ್ರಶ್ನಾವಳಿ/ತಪಶೀಲನ್ನು ಬಳಸಿ ರಚಿಸಿ ಮಾಹಿತಿ ಸಂಗ್ರಹಿಸಲಾಗಿದೆ. ಕ್ಷೇತ್ರ ಕಾರ್ಯ ಅಧ್ಯಯವನ್ನು ನಡೆಸಿ, ಮಾಹಿತಿ ಸಂಗ್ರಹಿಸಲಾಯಿತು. ಪ್ರತಿ ಶಿಕ್ಷಕ/ಶಿಕ್ಷಕರನ್ನು ಭೇಟಿ ಮಾಡಿ ಅಧ್ಯಯನಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಡಾ॥ ಪಿ.ಆರ್. ನಾಯಕ್ ರಚಿಸಿರುವ ಪ್ರಶ್ನಾವಳಿ ನೀಡುವುದರ ಮೂಲಕ ಪಡೆಯಲಾಯಿತು.
ತಪಶೀಲಿನಲ್ಲಿ 4 ವಿಭಾಗಗಳಿದ್ದು ಒಟ್ಟು 110 ಹೇಳಿಕೆಗಳಿವೆ ಎಲ್ಲಾ ಹೇಳಿಕೆಗಳಿಗೂ ಸೂಚಕ ನೀಡಿದ್ದು ಯಾವುದಾದರೂ ಒಂದು ಸೂಚಕವನ್ನು ಗುರ್ತಿಸುವುದರ ಮೂಲಕ ತಿಳಿಸಿ ಅಭಿಪ್ರಾಯ ಪಡೆಯಲಾಯಿತು.
ಪ್ರಸ್ತುತ ಅಧ್ಯಯನಕ್ಕಾಗಿ ಕರ್ನಾಟಕ ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶಿಕ್ಷಕರನ್ನು ಆಯ್ಕೆಮಾಡಿಕೊಳ್ಳಲಾಗಿತ್ತು ಒಟ್ಟಾರೆ 644 ಮಂದಿ ಶಿಕ್ಷಕರು ಮಾಹಿತಿ ನೀಡಿದ್ದಾರೆ.

**ಕೋಷ್ಟಕ 1:** ವಿತರಿಸಿದ ಪ್ರಶ್ನಾವಳಿಗಳು.

| **ಒಟ್ಟಾರೆ** | **1000** |
|---|---|
| ಪುರುಷರು | 500 |
| ಮಹಿಳೆಯರು | 500 |

ಪ್ರಸ್ತುತ ಅಧ್ಯಯನಕ್ಕಾಗಿ ಒಟ್ಟು 1000 ಶಿಕ್ಷಕರಿಗೆ ಮಾಹಿತಿಗಾಗಿ ಪ್ರಶ್ನಾವಳಿಗಳನ್ನು ವಿತರಿಸಲಾಯಿತು. ಮಹಿಳಾ ಮತ್ತು ಪುರುಷ ಇಬ್ಬರಿಗು ಸಮನಾಗಿ ಪ್ರತಿದರ್ಶ ಪ್ರಾತಿನಿಧ್ಯವಿರುವಂತೆ ವಿತರಿಸಲಾಯಿತು.

**ಕೋಷ್ಟಕ 2:** ಮಾಹಿತಿ ಪೂರ್ಣಗೊಂಡು ಸ್ವೀಕೃತವಾದ ಪ್ರಶ್ನಾವಳಿ ವಿವರ.

| **ಒಟ್ಟಾರೆ** | **644** |
|---|---|
| ಪುರುಷರು | 331 |
| ಮಹಿಳೆಯರು | 313 |

ಈ ಮೇಲಿನ ಕೋಷ್ಟಕದಂತೆ ತಿಳಿಸಿರುವಂತೆ ಒಟ್ಟು 1000 ಮಂದಿಯಲ್ಲಿ 644 ಪ್ರಾಥಮಿಕ ಶಾಲಾ ಶಿಕ್ಷಕರಿಂದ ಮಾಹಿತಿ ಒದಗಿಸಿದರು. ಇದರಲ್ಲಿ 331 ಪುರುಷರು ಹಾಗೂ 313 ಮಹಿಳೆಯರ ಅಗತ್ಯ ಮಾಹಿತಿ ನೀಡಿದ್ದಾರೆ.

**ಕೋಷ್ಟಕ 3:** ಸ್ಥಳೀಯವಾರು ಪ್ರಾತಿನಿಧ್ಯತೆ

| | **ಒಟ್ಟಾರೆ 1000** | **ಮಾಹಿತಿ ನೀಡಿದವರು** |
|---|---|---|
| ನಗರ | 500 | 340 |
| ಗ್ರಾಮೀಣ | 500 | 304 |

ವಿವಿಧ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ನೀಡಿರುವ ಮಾಹಿತಿ–ನಗರ ಪ್ರದೇಶದಿಂದ 340 ಮಂದಿ ಗ್ರಾಮೀಣ ಪ್ರದೇಶದಿಂದ 304 ಮಂದಿ ಮಾಹಿತಿ ನೀಡಿದ್ದಾರೆ.

**ಮಾಹಿತಿ ವಿಶ್ಲೇಷಣೆ ಮತ್ತು ಚರ್ಚೆ.**
ಅಧ್ಯಯನದ ಉದ್ದೇಶಗಳನ್ನು ಸಾಧಿಸಲು ಮಾಡಿದ್ದ ಆಧಾರ ಕಲ್ಪನೆಗಳನ್ನು ಫಲಿತಾಂಶದ ಆಧಾರದ ಮೇಲೆ ಒರೆ ಹಚ್ಚುವುದಕ್ಕಾಗಿ ಇಲ್ಲಿ ಪುನರ್‌ರೂಪಿಸಲಾಗಿದೆ. ಶಿಕ್ಷಕರ ವೃತ್ತಿಮನೋಭಾವಕ್ಕೆ ಸಂಬಂಧಿಸಿದಂತೆ ಒಟ್ಟಾರೆ ಶಿಕ್ಷಕರಲ್ಲಿ (ಮಹಿಳಾ–ಪುರುಷ) ಈ ಅಂಶಗಳಿಗೆ ಸಂಬಂಧಿಸಿದಂತೆ ವಿಶ್ಲೇಷಿಸಿದೆ.
ಪುರಷ ಮತ್ತು ಮಹಿಳಾ ಶಿಕ್ಷಕರ ವೃತ್ತಿಮನೋಭಾವ ವೃತ್ತಿತೃಪ್ತಿಯೊಡನೆ ಹೊಂದಿರುವ ಸಂಬಂಧ ಅರಿಯಲು ಸಂಖ್ಯಾಶಾಸ್ತ್ರೀಯ ತಂತ್ರ ಬಳಸಿ, ಸರಾಸರಿ, ಏಕಮುಖ ಅನೋವಾ ತಂತ್ರಗಳನ್ನು ಬಳಸಲಾಯಿತು.

**ಶಿಕ್ಷಕರ ತುಲನೆ.**
1.5 ರಲ್ಲಿ ಹೇಳಿರುವಂತೆಒಟ್ಟಾರೆ ಪ್ರತಿಚಯವು 644 ಶಿಕ್ಷಕರನ್ನು ಒಳಗೊಂಡಿದ್ದು 331 ಪುರುಷ ಶಿಕ್ಷಕರು ಮತ್ತು 313 ಮಹಿಳಾ ಶಿಕ್ಷಕರನ್ನು ನೀಡಿದ ಮಾಹಿತಿ ಅನ್ವಯ ಆಯ್ಕೆ ಮಾಡಿಕೊಳ್ಳಲಾಗಿತ್ತು. ಈ ಎರಡು ಸಮೂಹಗಳನ್ನು ಒಂದೇ ಪ್ರತಿಚಯವಾಗಿ

ತೆಗೆದುಕೊಳ್ಳುವುದೋ ಅಥವಾ ಬೇರೆ ಬೇರೆ ಸಮೂಹಗಳಾಗಿ ತೆಗೆದುಕೊಳ್ಳಬೇಕೆ ಎಂಬುದನ್ನು ತಿಳಿದುಕೊಳ್ಳಬೇಕಾಯಿತು.
ಒಟ್ಟಾರೆ ಸಮೂಹವನ್ನು ಗಮನಕ್ಕೆ ತೆಗೆದುಕೊಂಡು ಪ್ರತಿಯೊಂದು ಪರತಂತ್ರ ಚರದ ಮಾಧ್ಯ ಮತ್ತು ಶಿಷ್ಟ ವಿಚಲನೆಯ ಆಧಾರದ ಮೇಲೆ ಪುರುಷ, ಮತ್ತು ಮಹಿಳೆಯರ ಸಮೂಹಗಳನ್ನು ಮೂರುವರ್ಗಗಳಾಗಿ–ಗರಿಷ್ಟ (ಗ) ಮಧ್ಯಮ (ಮ) ಮತ್ತು ಕನಿಷ್ಠ (ಕ) ವಿಂಗಡಿಸಿಕೊಳ್ಳಲಾಯಿತು. ಅವುಗಳು ಇಂತಿವೆ.–

| ವರ್ಗ | ಪ್ರಾಪ್ತಾಂಕ |
|---|---|
| ಗರಿಷ್ಠ | >(M+σ) |
| ಮಧ್ಯಮ | (M+σ) ಮತ್ತು ((M–σ)ಗಳ ನಡುವೆ |
| ಕನಿಷ್ಠ | <(M–σ) |

ವಿವಿಧ ಪರತಂತ್ರ ಚರಗಳಲ್ಲಿರುವ ಮೂರುವರ್ಗಗಳಿಗೆ ಸಂಬಂಧಿಸಿದ ಎರಡು ಸಮೂಹಗಳ ವಿತರಣೆಗಳನ್ನು ಕೋಷ್ಟಕ 9ರಲ್ಲಿ ಪ್ರಸ್ತುತಪಡಿಸಲಾಗಿದೆ.

**ಕೋಷ್ಟಕ 4:** ಚರಗಳ ವಿವಿಧ ಮಟ್ಟಗಳಿಗೆ ಸಂಬಂದಿಸಿದಂತೆ ಶಿಕ್ಷಕರ ವಿತರಣೆಗಳು

| ಚರಗಳು | | ಪುರಷರು–331 | | | ಮಹಿಳೆಯರು 313 | | |
|---|---|---|---|---|---|---|---|
| | | ಹೆಚ್ | ಎಂ | ಎಲ್ | ಹೆಚ್ | ಎಂ | ಎಲ್ |
| 1 | ಎ.ಟಿ.ಪಿ | 38 | 264 | 29 | 42 | 250 | 21 |
| 2 | ಎ.ಎಸ್.ಜಿ | 46 | 253 | 32 | 38 | 263 | 12 |
| 3 | ಎ.ಎಸ್.ಡಬ್ಲ್ಯೂ | 35 | 262 | 34 | 42 | 249 | 22 |
| 4 | ಎ.ಪಿ.ಜಿ | 46 | 237 | 48 | 35 | 181 | 97 |
| 5 | ಜೆ.ಎಸ್. | 44 | 239 | 48 | 37 | 179 | 97 |

**ಕೋಷ್ಟಕ 5:** ಪುರುಷ ಮತ್ತು ಮಹಿಳಾ ಶಿಕ್ಷಕರ ಸರಾಸರಿಗಳು

| | | ಪುರುಷರು | | ಮಹಿಳೆಯರು | | ಟಿ |
|---|---|---|---|---|---|---|
| ಚರಗಳು | | ಮಾಧ್ಯ | ಶಿಷ್ಟವಿಚಲನೆ | ಸರಾಸರಿ | ಶಿಷ್ಟವಿಚಲನೆ | |
| 1 | ಎ.ಎಸ್.ಜಿ | 104.00 | 15.20 | 105.00 | 14.10 | 0.95 |
| 2 | ಎ.ಎಸ್.ಡಬ್ಲ್ಯೂ | 106.00 | 14.40 | 108.00 | 14.70 | 0.26 |
| 3 | ಎ.ಪಿ.ಜಿ | 83.50 | 9.40 | 78.20 | 10.30 | 6.82** |
| 4 | ಜೆ.ಎಸ್. | 33.40 | 11.40 | 33.80 | 10.80 | 0.34 |

*ಟಿ=1.96–0.05 ಮಟ್ಟದಲ್ಲಿ ಸಾರ್ಥಕವಾಗಿದೆ.
**ಟಿ=2.58–0.01 ಮಟ್ಟದಲ್ಲಿ ಸಾರ್ಥಕವಾಗಿದೆ.

ವೃತ್ತಿಮನೋಭಾವಗಳಿಗೆ ಸಂಬಂಧಿಸಿದ ಮೌಲ್ಯಗಳ ಪೈಕಿ ಒಂದು 'ಟಿ' ಮೌಲ್ಯವು 0.01 ಮಟ್ಟದಲ್ಲೂ ಹಾಗೂ ಮತ್ತೊಂದು 0.05 ಮಟ್ಟದಲ್ಲೂ ಸಾರ್ಥಕವಾಗಿದೆ. ಅಂದರೆ, ಎ.ಟಿಪಿ ಮತ್ತು ಎ.ಪಿ.ಜಿ.ಗಳಿಗೆ ಸಂಬಂಧಿಸಿದಂತೆ ಪುರುಷ ಮತ್ತು ಮಹಿಳಾ ಶಿಕ್ಷಕರ ಸರಾಸರಿಗಳ ನಡುವೆ ಇರುವ ವ್ಯತ್ಯಾಸಗಳು ಸಾರ್ಥಕವಾಗಿರುವುದು ತಿಳಿಯುತ್ತದೆ. ಇದಲ್ಲದೆ ಎ.ಟಿ.ಪಿ. ಗೆ ಸಂಬಂಧಿಸಿದಂತೆ ಮಹಿಳಾ ಶಿಕ್ಷಕರ ಸರಾಸರಿಯೇ ಪುರುಷ ಶಿಕ್ಷಕರಿಗಿಂತ ಅಧಿಕವಾಗಿದೆ. ಅಂದರೆ, ಈ ಸಂದರ್ಭದಲ್ಲಿ ಮಹಿಳಾ ಶಿಕ್ಷಕರೇ ಉತ್ತಮವಾಗಿರುವರು. ಆದರೆ ಎ.ಪಿ.ಜಿ. ಗೆ ಸಂಬಂದಿಸಿದ ಪರಿಸ್ಥಿತಿ ಇದಕ್ಕೆ ವಿರುದ್ಧವಾಗಿದೆ. ಅಂದರೆ, ಎ.ಪಿ.ಜಿ. ಯಲ್ಲಿ ಪುರುಷ ಶಿಕ್ಷಕರೇ ಮಹಿಳಾಶಿಕ್ಷಕರಿಗಿಂತ ಉತ್ತಮವಾಗಿರುವರು. ಆರ್.ಪಿ.ಪಿ, ಆರ್.ಪಿ.ಓ, ಎ.ಎಸ್.ಜಿ., ಎ.ಎಸ್.ಡಬ್ಲ್ಯೂ ಮತ್ತು ಜೆ.ಎಸ್.ಗಳಿಗೆ ಸಂಬಂಧಿಸಿದಂತೆಯೂ ಮಹಿಳಾ ಶಿಕ್ಷಕರ ಸರಾಸರಿಗಳೇ ಅಧಿಕವಾಗಿರುವುದರಿಂದ ಅವರು ವೃತ್ತಿಮನೋಭಾವಗಳು ಹಾಗೂ ವೃತ್ತಿತೃಪ್ತಿಗಳಲ್ಲಿ ಉತ್ತಮವಾಗಿರುವರು ಎಂದು ಹೇಳಬಹುದು.

**ಕೋಷ್ಟಕ 6:** ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಶಿಕ್ಷಕರ ಸರಾಸರಿಗಳು

| | | ನಗರ(169) | | ಗ್ರಾಮೀಣ (304) | | |
|---|---|---|---|---|---|---|
| ಚರಗಳು | | ಸರಾಸರಿ | ಶಿಷ್ಟವಿಚಲನೆ | ಸರಾಸರಿ | ಶಿಷ್ಟವಿಚಲನೆ | ಟಿ ಮೌಲ್ಯ |
| 1 | ಎ.ಟಿ.ಪಿ | 93.90 | 10.60 | 93.20 | 12.20 | 0.62 |
| 2 | ಎ.ಎಸ್.ಜಿ | 103.80 | 12.50 | 103.90 | 16.30 | 0.78 |
| 3 | ಎ.ಎಸ್.ಡಬ್ಲ್ಯೂ | 106.50 | 15.70 | 106.50 | 14.40 | 0.00 |
| 4 | ಎ.ಪಿ.ಜಿ | 79.80 | 10.40 | 82.50 | 10.10 | 2.75** |
| 5 | ಜೆ.ಎಸ್. | 33.60 | 11.00 | 33.80 | 11.40 | 0.19 |

*ಟಿ.1.96–0.05 ಮಟ್ಟದಲ್ಲಿ ಸಾರ್ಥಕವಾಗಿದೆ
**ಟಿ–1.59–0.01 ಮಟ್ಟದಲ್ಲಿ ಸಾರ್ಥಕವಾಗಿದೆ.

**ಕೋಷ್ಟಕ 7:** 1.7.1 ಮಹಿಳಾ ಶಿಕ್ಷಕರ ಮಾಧ್ಯ, ಮಾಧ್ಯಕ ಮುಂತಾದವು (313)

| ಕ್ರ.ಸಂ | ಚರಗಳು | ಮಾಧ್ಯ | ಮಾಧ್ಯಕ | ಬಹುಳಕ | ವಿಷಮತೆ | ಶೃಂಗತೆ |
|---|---|---|---|---|---|---|
| 1 | ಎ.ಟಿ.ಪಿ | 94.90 | 95.00 | 94.70 | –0.60 | 0.261 |
| 2 | ಎ.ಎಸ್.ಜಿ | 105.00 | 105.00 | 105.00 | –0.40 | 0.263 |
| 3 | ಎ.ಎಸ್.ಡಬ್ಲ್ಯೂ | 108.00 | 107.00 | 110.00 | –0.20 | 0.259 |
| 4 | ಎ.ಪಿ.ಜಿ | 78.20 | 78.00 | 78.6 | –0.20 | 0.261 |
| 5 | ಜೆ.ಎಸ್ | 33.80 | 33.00 | 35.40 | –0.40 | 0.263 |

ಕೋಷ್ಟಕ 8ರಲ್ಲಿನ ಮಹಿಳಾ ಶಿಕ್ಷಕರಿಗೆ ಸಂಬಂಧಿಸಿದ ಮಾಧ್ಯ, ಮಾಧ್ಯಕ, ವಿಷಮತೆ, ಶೃಂಗತೆಗಳನ್ನು ಗಮನಿಸಿದಾಗ ಎ.ಎಸ್.ಡಬ್ಲ್ಯೂ. ಒಂದನ್ನು ಹೊರತುಪಡಿಸಿ ಎಲ್ಲ ಚರಗಳಿಗೆ ಸಂಬಂಧಿಸಿದಂತೆ ಮಾಧ್ಯ, ಮಾಧ್ಯಕಗಳು ಪ್ರಸಾಮಾನ್ಯ ವಿತರಣೆಗೆ ಸಮೀಪವಾಗಿವೆ. ಈ ಮೇಲಿನ ಸಂಗತಿಗಳಿಂದ ಒಟ್ಟಾರೆ ಪ್ರತಿಚಯದ ಪ್ರಾತಿನಿಧ್ಯವನ್ನು ನಿರೂಪಿಸಲು ಇದು ಸಹಾಯಮಾಡುತ್ತದೆ.

**ಶಿಕ್ಷಕರ ವೃತ್ತಿತೃಪ್ತಿ ಮತು ವೃತ್ತಿ ಮನೋಭಾವಗಳು.**
**ಒಟ್ಟಾರೆ ಶಿಕ್ಷಕರು:–**
ಒಟ್ಟಾರೆ ಶಿಕ್ಷಕರ ವೃತ್ತಿತೃಪ್ತಿ ಮತ್ತು ವೃತ್ತಿಮನೋಭಾವಗಳಿಗೆ ಸಂಬಂಧಿಸಿರುವ ವಿಚಾರಣೆಯ ಏಕಮುಖ ವಿಶ್ಲೇಷಣೆಯ ಫಲಿತಾಂಶವನ್ನು ಈ ಮುಂದಿನ ಕೋಷ್ಟಕದಲ್ಲಿ ಪ್ರಸ್ತುತಪಡಿಸಲಾಗಿದೆ.

**ಕೋಷ್ಟಕ 8:** 1.7.1 ಒಟ್ಟಾರೆ ಶಿಕ್ಷಕರ ವೃತ್ತಿತೃಪ್ತಿ ಮತ್ತು ವೃತ್ತಿ ಮನೋಭಾವಗಳು ಓ–644

| ಚರ | ಸ್ವಾತಂತ್ರ್ಯ ಮಟ್ಟ | ವರ್ಗಗಳ ಮೊತ್ತ | ವರ್ಗಗಳ ಮೊತ್ತದ ಸರಾಸರಿ | 'ಎಫ್' ಮೌಲ್ಯ |
|---|---|---|---|---|
| ಎ.ಟಿ.ಪಿ | 2<br>641<br>643 | 3035.0647<br>274706.7600<br>277741.8247 | 1557.5323<br>428.5500 | 3.5410<br>* |
| ಎ.ಎಸ್.ಜಿ | 2<br>641<br>643 | 5276.2450<br>17226.9350<br>22503.1800 | 2638.1225<br>26.875 | 98.1626<br>** |
| ಎ.ಎಸ್.ಡಬ್ಲ್ಯೂ | 2<br>641<br>643 | 11009.3400<br>798896.2130<br>809905.5530 | 5504.67<br>1246.29 | 4.4168<br>* |
| ಎ.ಪಿ.ಜಿ | 2<br>641<br>643 | 9302.1790<br>124482.6580<br>133784.8370 | 4651.0895<br>194.1996 | 23.9500<br>** |

* ಎಫ್ ಮೌಲ್ಯ 3.06–0.05 ಮಟ್ಟದಲ್ಲಿ ಸಾರ್ಥಕ್ಯ ಹೊಂದಿದೆ.
** ಎಫ್ ಮೌಲ್ಯ 6.69–0.01 ಮಟ್ಟದಲಿ ಸಾರ್ಥಕ್ಯ ಹೊಂದಿದೆ.

ವಿಚಾರಣೆಯ ಏಕಮುಖ ವಿಶ್ಲೇಷಣೆಯ ಸಾರಾಂಶಗಳು ಕೋಷ್ಟಕ 01ರಲ್ಲಿ ನಮೂದಿಸಲಾಗಿದೆ. ಇಲ್ಲಿ ನಾಲ್ಕು ವೃತ್ತಿ ಮನೋಭಾವಗಳಿಗೆ ಸಂಬಂಧಪಟ್ಟಂತೆ ಜೆ.ಎಸ್.ನ ವಿವಿಧ ಮಟ್ಟಗಳಲ್ಲಿ ಸಾರ್ಥಕ ವ್ಯತ್ಯಾಸಗಳಿರುವುದು ಸ್ಪಷ್ಟವಾಗಿದೆ. ಹಾಗೂ ಎಲ್ಲ ನಾಲ್ಕು ಎಫ್ ಮೌಲ್ಯಗಳೂ ಸಾರ್ಥಕ್ಯವನ್ನು ಪಡೆದಿವೆ–0.01 ಮಟ್ಟದಲ್ಲಿ ಎರಡು, ಮತ್ತೆರಡು 0.05ಮಟ್ಟದಲ್ಲಿ. ಎ.ಟಿ.ಪಿ. ಮತ್ತು ಎ.ಎಸ್.ಜಿ.ಗಳಿಗೆ ಸಂಬಂಧಿಸಿದಂತೆ ಸರಾಸರಿಗಳಿಂದ ಲಭಿಸಿದ ಸಂಬಂಧ ನಿರ್ದೇಶನವು ಸಂಬಂಧಗಳನ್ನು ಕುರಿತ ಮುನ್ನುಡಿಗೆ ಅನುಗುಣವಾಗಿದೆ. ಇದಲ್ಲದೆ ಉಳಿದ ಎರಡು ವೃತ್ತಿಮನೋಭಾವಗಳಿಗೆ ಸಂಬಂದಿಸಿದಂತೆ–ಎ.ಎಸ್.ಡಬ್ಲ್ಯೂ.. ಎ.ಪಿ.ಜಿ. ಸರಾಸರಿಗಳಿಂದ ಲಭಿಸಿದ ನಿರ್ದೇಶನವು ತಾರ್ಕಿಕ ಮುನ್ಸೂಚನೆಗೆ ವಿರುದ್ಧವಾಗಿದೆ. ಅಂದರೆ ಎ.ಎಸ್.ಡಬ್ಲ್ಯೂ. ನಲ್ಲಿ ಮಧ್ಯಮ ವರ್ಗದ ಸರಾಸರಿ ಅಧಿಕವಾಗಿದ್ದು, ಗರಿಷ್ಠ ವರ್ಗದ ಸರಾಸರಿ ಮಧ್ಯಮ ಮಟ್ಟದ್ದಾಗಿದೆ. ಹಾಗೂ ಎ.ಪಿ.ಜಿ.ಯಲ್ಲಿ ಕನಿಷ್ಠ ವರ್ಗದ ಸರಾಸರಿ ಮಧ್ಯಮವಾಗಿದ್ದು, ಮಧ್ಯಮ ವರ್ಗದ ಸರಾಸರಿ ಕನಿಷ್ಠವಾಗಿದೆ. ಆದ್ದರಿಂದ ವೃತ್ತಿತೃಪ್ತಿಯು ನಾಲ್ಕು ವೃತ್ತಿ ಮನೋಭಾವಗಳೊಡನೆ ಹೊಂದಿರುವ ಸಂಬಂಧ ಸಾರ್ಥಕ್ಯವನ್ನು ಪಡೆದಿದೆ. ಮನೋಭಾವ ಹೆಚ್ಚಾದಂತೆ ವೃತ್ತಿತೃಪ್ತಿಯೂ ಹೆಚ್ಚಾಗುತ್ತದೆ.

**ಪುರುಷ ಶಿಕ್ಷಕರು**
ಪುರುಷ ಶಿಕ್ಷಕರ ವೃತ್ತಿತೃಪ್ತಿ ಮತ್ತು ವೃತ್ತಿಮನೋಭಾವಗಳಿಗೆ ಸಂಬಂದಿಸಿರುವ ವಿಚಾರಣೆಯ ಏಕಮುಖ ವಿಶ್ಲೇಷಣೆಯ ಫಲಿತಾಂಶವನ್ನು ಕೋಷ್ಟಕ 36ರಲ್ಲಿ ನೀಡಲಾಗಿದೆ.

**ಕೋಷ್ಟಕ 9:** 1.7.2ಪುರುಷ ಶಿಕ್ಷಕರ ವೃತ್ತಿತೃಪ್ತಿ ಮತ್ತು ವೃತ್ತಿಮನೋಭಾವಗಳು ಓ–331

| ಚರ | ಸ್ವಾತಂತ್ರ್ಯ ಮಟ್ಟ | ವರ್ಗಗಳ ಮೊತ್ತ | ವರ್ಗಗಳ ಮೊತ್ತದ ಸರಾಸರಿ | 'ಎಫ್' ಮೌಲ್ಯ |
|---|---|---|---|---|
| ಎ.ಟಿ.ಪಿ | 2<br>328<br>330 | 10.39.1200<br>8053.2800<br>9092.4000 | 519.5600<br>24.5500 | 21.1600<br>** |

| | | | | |
|---|---|---|---|---|
| ಎ.ಎಸ್.ಜಿ | 2<br>328<br>330 | 1156.8860<br>58014.6140<br>59171.5000 | 578.4430<br>176.8738 | 3.2704<br>* |
| ಎ.ಎಸ್.ಡಬ್ಲ್ಯೂ | 2<br>328<br>330 | 5093.5400<br>1193452.0000<br>1198545.5400 | 2546.7700<br>3638.5732 | 0.6999 |
| ಎ.ಪಿ.ಜಿ | 2<br>328<br>330 | 3417.4200<br>9179.0228<br>12596.4428 | 1708.7100<br>317.7386 | 5.3777<br>* |

*. ಎಫ್=3.07–0.05 ಮಟ್ಟದಲ್ಲಿ ಸಾರ್ಥಕವಾಗಿದೆ.
*. ಎಫ್. 6.71–0.01 ಮಟ್ಟದಲ್ಲಿ ಸಾರ್ಥಕವಾಗಿದೆ.

ಕೋಷ್ಟಕ 02ರಲ್ಲಿ ಕಂಡುಬಂದ ವಿಚಾರಣೆಯ ಏಕಮುಖ ವಿಶ್ಲೇಷಣೆಯ ಫಲಿತಾಂಶಗಳ ಸಾರಾಂಶಗಳು ಹೀಗಿವೆ: ವೃತ್ತಿ ಮನೋಭಾವಗಳಿಗೆ ಸಂಬಂಧಿಸಿದಂತೆ ಜೆ.ಎಸ್.ನ ವಿವಿಧ ಮಟ್ಟಗಳಲ್ಲಿ ಸಾರ್ಥಕ ವ್ಯತ್ಯಾಸಗಳಿವೆ. ಇಲ್ಲಿ ಮೂರು ಎಫ್ ಮೌಲ್ಯಗಳು ಸಾರ್ಥಕ್ಯವನ್ನು ಪಡೆದಿವೆ. 0.01 ಮಟ್ಟದಲ್ಲಿ ಒಂದು, 0.05 ಮಟ್ಟದಲ್ಲಿ ಮತ್ತೆರಡು ಸಾರ್ಥಕ್ಯ ಹೊಂದಿವೆ. ಎ.ಟಿ.ಪಿ.ಎ.ಪಿ.ಜಿ ವೃತ್ತಿ ಮನೋಭಾವಗಳಿಗೆ ಸಂಬಂಧಿಸಿದಂತೆ ಸರಾಸರಿಗಳಿಂದ ಲಭಿಸಿದ ಸಂಬಂಧ ನಿರ್ದೇಶನವು, ಸಂಬಂದಗಳನ್ನು ಕುರಿತು ಮುನ್ನುಡಿಕೆಗೆ ಅನುಗುಣವಾಗಿದೆ. ಉಳಿದ ಒಂದು ವೃತ್ತಿಮನೋಭಾವಕ್ಕೆ ಸಂಬಂಧಿಸಿದಂತೆ, ಎ.ಎಸ್.ಜಿ. ಸರಾಸರಿಗಳಿಂದ ಲಭಿಸಿದ ನಿರ್ದೇಶನವು ತಾರ್ಕಿಕ ಮುನ್ನುಡಿಗೆ ವಿರುದ್ಧವಾಗಿದೆ. ಏಕೆಂದರೆ ಎ.ಸ್.ಜಿ.ನಲ್ಲಿ ಮಧ್ಯಮವರ್ಗದ ಸರಾಸರಿಯು ಗರಿಷ್ಠವಾಗಿದ್ದು, ಪ್ರಥಮವರ್ಗದ ಸರಾಸರಿ ಮಧ್ಯಮವಾಗಿದೆ. ಆದ್ದರಿಂದ ಆ.ಕ15ರಲ್ಲಿ ಮಾಡಿಕೊಂಡಿದ್ದ ನಾಲ್ಕು ಸಂಶೋಧನಾ ಫಲಿತಾಂಶದ ಆಧಾರದ ಮೇಲೆ ಹೇಳುವುದಾದರೆ, ವೃತ್ತಿತೃಪ್ತಿಯು ವೃತ್ತಿಮನೋಭಾವಗಳೊಡನೆ ಸಾರ್ಥಕ ಸಂಬಂಧ ಹೊಂದಿದೆ. ವೃತ್ತಿಮನೋಭಾವ ಅಧಿಕವಾದಂತೆ ವೃತ್ತಿತೃಪ್ತಿಯು ಹೆಚ್ಚುತ್ತದೆ.

**ಮಹಿಳಾ ಶಿಕ್ಷಕರು.**

**ಕೋಷ್ಟಕ 10:** 1.7.3 ಮಹಿಳಾ ಶಿಕ್ಷಕರ ವೃತ್ತಿತೃಪ್ತಿ ಮತ್ತು ವೃತ್ತಿಮನೋಭಾವಗಳು ಓ–313

| ಚರ | ಸ್ವಾತಂತ್ರ್ಯ ಮಟ್ಟ | ವರ್ಗಗಳ ಮೊತ್ತ | ವರ್ಗಗಳ ಮೊತ್ತದ ಸರಾಸರಿ | 'ಎಫ್' ಮೌಲ್ಯ |
|---|---|---|---|---|
| ಎ.ಟಿ.ಪಿ | 2<br>310<br>312 | 60528.2069<br>170675.8931<br>231204.090 | 30263.644<br>550.5632 | 54.968<br>** |
| ಎ.ಎಸ್.ಜಿ | 2<br>310<br>312 | 5917.121<br>112388.00<br>1183305.12 | 2958.5605<br>362.5419 | 8.1606<br>** |
| ಎ.ಎಸ್.ಡಬ್ಲ್ಯೂ | 2<br>310<br>312 | 5582.0002<br>103054.1848<br>108636.1850 | 2791.00<br>332.4328 | 8.3956<br>** |
| ಎ.ಪಿ.ಜಿ | 2<br>310<br>312 | 251.4412<br>18284.5588<br>18536.0000 | 125.7206<br>58.9824 | 2.1314 |

* ಎಫ್=3.07–0.05 ಮಟ್ಟದಲ್ಲಿ ಸಾರ್ಥಕವಾಗಿದೆ.
** ಎಫ್=6.71–0.01 ಮಟ್ಟದಲ್ಲಿ ಸಾರ್ಥಕವಾಗಿದೆ.

ಈ ಕೋಷ್ಟಕ 37ರಲ್ಲಿ ಮಹಿಳಾ ಶಿಕ್ಷಕರ ವೃತ್ತಿಮನೋಭಾವಗಳಿಗೂ ವೃತ್ತಿತೃಪ್ತಿಗೂ ಸಂಬಂಧಿಸಿದಂತಹ ವಿಚಾರಣೆಯ ಏಕಮುಖ ವಿಶ್ಲೇಷಣೆಯ ಫಲಿತಾಂಶಗಳನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ. ಮೂರು ವೃತ್ತಿಮನೋಭಾವಗಳಿಗೆ ಸಂಬಂಧಿಸಿದಂತೆ ಜೆ.ಎಸ್.ನಲ್ಲಿ ಸಾರ್ಥಕ ವ್ಯತ್ಯಾಸಗಳಿವೆ ಇಲ್ಲಿ ಮೂರು ಎಫ್ ಮೌಲ್ಯಗಳಲ್ಲಿ 0.01ಮಟ್ಟದಲ್ಲೇ ಸಾರ್ಥಕ್ಯವನ್ನು ಪಡೆದಿವೆ. ಇದಲ್ಲದೆ ಎ.ಟಿ.ಪಿ, ಎ.ಎಸ್.ಜಿ.ಗೆ ಸಂಬಂಧಿಸಿದಂತೆ ಸರಾಸರಿಗಳಿಂದ ಲಭಿಸಿದ ಸಂಬಂಧನಿರ್ದೇಶನವು ಸಂಬಂಧಗಳನ್ನು ಕುರಿತ ಮುನ್ನುಡಿಗೆ ಅನುಗುಣವಾಗಿದೆ. ಆದರೆ ಎ.ಎಸ್.ಡಬ್ಲ್ಯೂಗೆ ಸಂಬಂಧಿಸಿದಂತೆ ಸರಾಸರಿಗಳಿಂದ ದೊರತ ನಿರ್ದೇಶನವು ತಾರ್ಕಿಕ ಮುನ್ನುಡಿಗೆ ವಿರುದ್ದವಾಗಿದೆ. ಎ.ಎಸ್.ಡಬ್ಲ್ಯೂ ನಲ್ಲಿ ಮಧ್ಯಮ ವರ್ಗದ ಸರಾಸರಿಯೇ ಹೆಚ್ಚಾಗಿದ್ದು, ಪ್ರಥಮ ವರ್ಗದ ಸರಾಸರಿ ಮಧ್ಯಮವರ್ಗ ಸೇರಿರುವುದು ಸ್ಪಷ್ಟವಾಗಿದೆ. ಮೇಲಿನ ವಿವರಣೆಯನ್ನು ಅರ್ಥೈಸಿ ಪರ್ಯಾಯವಾಗಿ ಹೇಳುವುದಾದರೆ ವೃತ್ತಿತೃಪ್ತಿಯು ವೃತ್ತಿಮನೋಭಾವಗಳೊಡನೆ ಸಾರ್ಥಕ ಸಂಬಂಧವನ್ನು ಹೊಂದಿದೆ. ಅರ್ಥಾತ್ ವೃತ್ತಿಮನೋಭಾವಗಳು ಹೆಚ್ಚಾದಂತೆ ವೃತ್ತಿತೃಪ್ತಿಯೂ ಹೆಚ್ಚುತ್ತದೆ.

**ಉಪಸಂಹಾರ**

ಪುರಷ ಶಿಕ್ಷಕರ ವೃತ್ತಿತೃಪ್ತಿ ಮತ್ತು ವೃತ್ತಿಮನೋಭಾವ(ಒಟ್ಟಾರೆ ಶಾಲಾ–ಕೆಲಸ ಬಗೆಗಿನ ಮನೋಭಾವ)
ಪುರಷ ಶಿಕ್ಷಕರ ಂಖಫ– ವೃತ್ತಿತೃಪ್ತಿಗೂ ಉತ್ತಮ ಸಂಬಂಧ

ಹೊಂದಿಲ್ಲ.

ಮಹಿಳಾ ಶಿಕ್ಷಕರ ಂಕಉ– (ವೃತ್ತಿ ಬೆಳವಣಿಗೆ ಮನೋಭಾವ) ಶಿಕ್ಷಕರ ಂಖಫ ಮತು ಎ.ಖ ನಿಕಟವಾಗಿರಬೇಕು, ಶಿಕ್ಷಕರಿಗೆ ಹೆಚ್ಚಿನ ಶೈಕ್ಷಣಿಕ ಸ್ವಾತಂತ್ರ್ಯ ದೊರಕಬೇಕು, ಅಧ್ಯಾಪಕರ ಕಾರ್ಯಗಳ ಬಗ್ಗೆ ಸುದುದ್ದೇಶಿತ ಮೇಲ್ವಿಚಾರಣೆ, ಮಾರ್ಗದರ್ಶನ ದೊರಕಿಸಬೇಕು ಇದರಿಂದ ಧನಾತ್ಮಕ ಕಾರ್ಯಭಾವ ಬೆಳೆದು ವೃತ್ತಿತೃಪ್ತಿ ಅಧಿಕವಾಗುತ್ತಿದೆ.

ಮಹಿಳಾ ಶಿಕ್ಷಕರಲ್ಲಿ ಂಕಉ ಉತ್ತಮಗೊಂಡಂತೆ ವೃತ್ತಿತೃಪ್ತಿ ಅಧಿಕಗೊಳ್ಳುತ್ತಿದೆ. ಅಧ್ಯಾಪಕರಲ್ಲಿ ವೃತ್ತಿಮನೋಭಾವ ಅಧಿಕಗೊಳ್ಳಲು, ವೃತ್ತಿತೃಪ್ತಿಯೊಡನೆ ಸಾರ್ಥಕ ಸಂಬಂಧ ಹೊಂದಲು ವೃತ್ತಿಬೆಳವಣಿಗೆಗೆ ಅಗತ್ಯವಾದ ಕ್ರಮಗಳನ್ನು ಅಧ್ಯಾಪಕರು ಮತ್ತು ಪಾಲುದಾರರು ಒದಗಿಸಿಕೊಡಬೇಕು. ಮಹಿಳಾ ಅಧ್ಯಾಪಕರಿಗೆ ಅಗತ್ಯವಾದ ಸೌಲಭ್ಯ, ತರಬೇತಿಗಳು, ಸಮಾಲೋಚನೆ, ಶೈಕ್ಷಣಿಕ ಬೆಳವಣಿಗೆಗೆ ಅಗತ್ಯ ಪೂರಕವಾತಾವರಣ ಒದಗಿಸಿಕೊಡಬೇಕು ಇದರಲ್ಲಿ ವ್ಯಕ್ತಿಯ ಬಗೆಗಿನ ಮನೋಭಾವ ಸಕಾರಾತ್ಮಕಗೊಂಡ ವೃತ್ತಿತೃಪ್ತಿ ಸಾಧ್ಯವಾಗುತ್ತಿದೆ.

ವೃತ್ತಿಮನೋಭಾವಗಳಲ್ಲಿ ಶಾಲಾಕೆಲಸದ ಬಗ್ಗೆ ಮನೋಭಾವ ಉತ್ತಮವಾಗಿಲ್ಲ. ಇದು ಪುರಷ ಶಿಕ್ಷಕರಲ್ಲಿ ಕಂಡುಬಂದಿದೆ. ಹಾಗೆಯೇ ಮಹಿಳಾ ಶಿಕ್ಷಕರಲ್ಲಿ ವೃತ್ತಿ ಬೆಳವಣಿಗೆ ಮನೋಭಾವ ಉತ್ತಮವಾಗಿಲ್ಲ. ಈ ಅಂಶಗಳು ವೃತ್ತಿತೃಪ್ತಿಯನ್ನು ಪ್ರಭಾವಿಸುತ್ತದೆ. ಹೀಗಾಗಿ ವೃತ್ತಿತೃಪ್ತಿಗಾಗಿ ವೃತ್ತಿಮನೋಭಾವದಲ್ಲಿ ಉತ್ತಮಿಕೆ ಕಂಡುಬರಲೇಬೇಕು.

ಎರಡೂ (ಪುರಷ/ಮಹಿಳೆ) ಗುಂಪುಗಳಲ್ಲಿ ಇತರ 3 ಮನೋಭಾವಗಳು ಉತ್ತಮವಾಗಿದ್ದು ವೃತ್ತಿತೃಪ್ತಿಯನ್ನು ಪ್ರಭಾವಿಸುತ್ತಿವೆ. ವೃತ್ತಿಮನೋಭಾವವು ವೃತ್ತಿತೃಪ್ತಿಯೊಡನೆ ಸಮರ್ಥವಾದ ಸಂಬಂಧವನ್ನು ಹೊಂದಿರುವುದಿಲ್ಲ. 4 ಅಂಶಗಳಲ್ಲೂ ಕೂಡ ಸಂಬಂಧವನ್ನು ಹೊಂದುವುದು ಅಗತ್ಯವಾಗುತ್ತದೆ. ಇದಕ್ಕೆ ಅಗತ್ಯ ಶೈಕ್ಷಣಿಕ ಸೌಕರ್ಯ ಒದಗಲೇಬೇಕು.

## ಗ್ರಂಥಋಣ


1. ಬಸವಯ್ಯ.ಕೆ ಆಧುನಿಕ ಶಿಕ್ಷಣದ ನಿಯಮಗಳು–ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ–1977
2. ಅಡವಾಲ್ ಎನ್.ಬಿ ಕ್ವಾಲಿಟಿ ಆಫ್ ಟೀಚರ್ಸ್, ಅಮಿತಾಬ್ ಪ್ರಕಾಶನ, ಅಲಹಾಬಾದ್–1979
3. ೨ರಾಣಿಕ್.ಎಸ್.ಡಿ. ಸುಲಭ ಸಂಖ್ಯಾಶಾಸ್ತ್ರ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ–1981
4. ವೀರಪ್ಪ ಎನ್.ಎಸ್. ಶಿಕ್ಷಣ ಶಾಸ್ತ್ರದ ಪಾರಿಭಾಷಿಕ ನಿಘಂಟು. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ–1981
5. ವೀರಪ್ಪ ಎನ್.ಎಸ್. ಭಾರತೀಯ ಶಿಕ್ಷಣದ ಇತಿಹಾಸ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ–1984
6. ಸದಾಶಿವಯ್ಯ ಕೆ.ಎಸ್. ಶಿಕ್ಷಕ ನಡೆದುಬಂದ ದಾರಿ. ವಿಶ್ವನಾಥ ಪ್ರಕಾಶನ, ಮೈಸೂರು–1984
7. ಉದಯ್‌ಶಂಕರ್ ಎಜುಕೇಷನ್ ಆಫ್ ಇಂಡಿಯನ್ ಟೀಚರ್ಸ್, ಸ್ಟರ್ಲಿಂಗ್ ಪಬ್ಲಿಷರ್ಸ್, ನ್ಯೂಡೆಲ್ಲಿ–1984
8. ಹಂದೆ. ಕೆ.ಆರ್ ಸಾರ್ಥಕ ಶಿಕ್ಷಣ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ–1987
9. ಕುರಿಯನ್ಸ್, ಜಾನ್ ಎಲಿಮೆಂಟರಿ ಎಜುಕೇಷನ್ ಇನ್ ಇಂಡಿಯಾ–ಮೈಥ್, ರಿಯಾಲಿಟಿ, ಆಲ್ಟರ್‌ನೇಟಿವ್, ವಿಕಾಸ್ ಪಬ್ಲಿಷರ್ಸ್, ನ್ಯೂಡೆಲ್ಲಿ–1987
10. ಅಗರ್‌ವಾಲ್ ಜೆ.ಸಿ ಎಲಿಮೆಂಟರಿ ಎಜುಕೇಷನ್ ಅಂಡ್ ಟೀಚರ್ಸ್ ಫಂಕ್ಷನ್ಸ್, ದೋಬಾ ಹೌಸ್, ದೆಹಲಿ–1990
11. ಗೋಯಲ್ ಜೆ.ಸಿ, ದ ಎಲಿಮೆಂಟರಿ ಸ್ಕೂಲ್ ಟೀಚರ್–ಎ ಪ್ರೊಫೈಲ್, ಎನ್.ಸಿ.ಇ.ಆರ್.ಟಿ., ನ್ಯೂಡೆಲ್ಲಿ–1990
12. ರವಿಕಾಂತ ಛೋಪ್ರ
13. ಯಶೋಧರ ಕೆ. ಶಿಕ್ಷಣದಲ್ಲಿ ಸಂಖ್ಯಾಶಾಸ್ತ್ರ, ಶಿಬಾ ಪ್ರಕಾಶನ, ಮೈಸೂರು–1993